ಜೋರಾಗಿ ಧ್ವನಿಯೆತ್ತಿ ಮಾತನಾಡಬೇಕಾದ ಅಗತ್ಯವಿಲ್ಲದೆ ಅವಳು ಸ್ವಲ್ಪ ಅವರ ಬಳಿಗೆ ಸರಿದಳು.

'ನೆಂಟರು ಎಲ್ಲರಿಗೂ ಇರುತ್ತಾರೆ. ಆದರೆ ಏನು ಲಾಭ ಸ್ವಾಮಿ? ನಮ್ಮಪ್ಪ ಕುಡುಕ. ಅವನೇ ನಮ್ಮಮ್ಮನನ್ನು ಕೊಂದು ಹಾಕಿದ. ನನಗೆ ಮದುವೆಯಾಗಲಿಲ್ಲ. ಆದರೆ ಸ್ವಾಮಿ, ಒಬ್ಬ ಕಳ್ಳಮುಂಡೆಮಗನೊಂದಿಗೆ ಸಂಬಂಧ ಕೂಡಿತು. ನನಗೆ ಇಬ್ಬರು ಮಕ್ಕಳು ಸ್ವಾಮಿ. ಅವನಿಗೆ ಜೂಜು, ಕುಡಿತ ಅಭ್ಯಾಸವಾಗಿಬಿಟ್ಟಿತು. ದಿನವೂ ಸಾವಿರಕ್ಕೆ ಸಾವಿರ ಗೆಲ್ಲುತ್ತಿರುತ್ತಾನೆ, ಕಳೆಯುತ್ತಿರುತ್ತಾನೆ. ಏನು ಮಾಡಲಿ ಸ್ವಾಮಿ? ಮನೆಯಲ್ಲಿ ತಿಂಡಿ ತಾಪತ್ರಯಗಳಿಗೆ ನನ್ನ ಸಂಪಾದನೆಯೇ. ಭಿಕ್ಷೆ ಎತ್ತಲು ಮಕ್ಕಳಿನ್ನೂ ಚಿಕ್ಕವರು. ನಮ್ಮವನಿಗೆ ಕುಡಿಯಲು ದಿನಕ್ಕೊಂದು ಪಾವಲಿ ಕೊಡುತ್ತೇನೆ. ಅವನಿಗೆ ನನ್ನ ನೋಡಿದರೆ ದಿಗಿಲು ಸ್ವಾಮಿ. ಕುಡಿಯದಿದ್ದರೆ ನನ್ನ ಮುಂದೆ ನಿಂತುಕೊಳ್ಳಲಾರ. ಅದಕ್ಕೇ ಕುಡಿಯುತ್ತಾನೆ ಸ್ವಾಮಿ. ಎಲ್ಲರಿಗೂ ಹಾಗೆಯೇ ಕುಡಿತ ಅಭ್ಯಾಸವಾಗಿಬಿಡುತ್ತದೆ ಸ್ವಾಮಿ.'

'ನೀನು ಎಷ್ಟು ಮಾತ್ರ ಸಂಪಾದಿಸುವೆ?'

'ಒಂದೊಂದು ದಿನ ಐದು ರೂಪಾಯಿಗಳು ಸಿಗುತ್ತೆ. ಒಂದೊಂದು ದಿನ ಬಿಡಿಗಾಸೂ ಇರದು. ಆದರೂ ಸ್ವಾಮಿ, ನಾನು ಕೇಳಿದರೆ ಯಾರೂ ಇಲ್ಲವೆನ್ನರು, ನಿಮ್ಮೊಬ್ಬರನ್ನು ಬಿಟ್ಟರೆ. ಅವರ ಜೊತೆ ತಮಾಷೆಯಾಗಿ ಮಾತನಾಡಿದರೆ ಕೊಟ್ಟುಬಿಡುತ್ತಾರೆ.'

ರಾವು ಅವರು ಅಂದುಕೊಳ್ಳದೆಯೇ ಅವಳ ಮುಖದ ಮೇಲೆ ಟಾರ್ಚಿನ ಬೆಳಕು ಹಾಕಿದರು. ಅವಳು ಕೊಂಚ ನಕ್ಕಳು. ಅವಳು ಯಾರನ್ನಾದರೂ ಸರಿಯೆ ಮೇಲೆ ಕೆಳಗೆ ಇಡಬಲ್ಲಳು. ಆದರೂ ಅವಳಿಗೆ ಮನಸ್ಸಿನಲ್ಲಿ ಅಷ್ಟು ಆಳವಾಗಿ ಇಷ್ಟಾಯಿಷ್ಟಗಳು ಇಲ್ಲದಂತೆ ಅವರಿಗೆ ಅನ್ನಿಸಿತು. ನಡೆಯುತ್ತಿರುವ ಆ ಕ್ಷಣದೊಂದಿಗೇ ಅವಳಿಗೆ ಸಜೀವ ಅನುಬಂಧ. ಕಳೆದ ಕಾಲದ ನೆನಪುಗಳ ಭಾರವಾಗಲಿ, ಬರಲಿರುವ ದಿನಗಳ ಕುರಿತ ಆಸೆಗಳಾಗಲಿ ಅವಳಿಗಿಲ್ಲ. ಅವಳ ನಡವಳಿಕೆಯನ್ನು ನಿರ್ಣಯಿಸುವ ಸೂತ್ರಗಳಿಲ್ಲ. ಆ ಸೂತ್ರಗಳಲ್ಲಿ ನಿಷೇಧಗಳು ನಿಜಕ್ಕೂ ಇಲ್ಲ. ನಿತ್ಯವೂ ಧರ್ಮಾಧರ್ಮ ಚಿಂತೆಯೊಂದಿಗೆ ವೇದನೆಗೊಳ್ಳುವ ಅಂತರಾತ್ಮವಾಗಲಿ, ನಾಗರಿಕರಿಗೆ ಸಹಜವಾದ ಸಂಕೀರ್ಣ ಮನೋಭಾವವಾಗಲಿ ಅವಳಿಗಿಲ್ಲ. ತಾನು ಎಂದೂ ತಿಳಿಯದ ಗಂಡಸಿನೊಂದಿಗೆ ಅವಳು ಶರೀರವನ್ನು ಅರ್ಪಿಸಿ ಹಗುರ ಮನಸ್ಸಿನಿಂದ ಸುಖಿಸಬಲ್ಲಳು.

ಅವರು ಅವಳ ತುಂಟ ಕಿರುನಗೆಯನ್ನು ಇನ್ನೂ ಹಾಗೆಯೇ ನೋಡುತ್ತ ಕುಳಿತರು. 'ಏನು ಸ್ವಾಮಿ ನನ್ನ ಕಡೆ ಹಾಗೆ ನೋಡುತ್ತೀರಿ?' ಅಂದಳು. 'ಹಿಂದಿದ್ದಷ್ಟು ರಂಗಾಗಿ ಈಗ ಇಲ್ಲ' ಅಂದಳು.

ಕೂಡಲೇ ಅವರು ತಮ್ಮಲ್ಲೇ ಮುದುಡಿಕೊಂಡರು. ತನ್ನ ಮನಸ್ಸಿನಲ್ಲಿ ಅಶ್ಲೀಲವಾದ ಭಾವಗಳು ಇರುತ್ತವೆ ಎಂಬಂತೆ ಅವಳು ಸೂಚಿಸಿದ್ದಕ್ಕೆ ಅವಳ ಮೇಲೆ ಅಸಹ್ಯವುಂಟಾಯಿತು.

'ನಿನ್ನತ್ತ ನೋಡಲಿಲ್ಲ ನಾನು' ಅಂದರು ಗಟ್ಟಿಯಾಗಿ. 'ಟಾರ್ಚ್ ಆರಿಸುವುದನ್ನು ಮರೆತು ಹೋದೆ.'

ಅಕಸ್ಮಾತ್ತಾಗಿ ದೊಡ್ಡ ಶಬ್ದವಾಯಿತು. ಕೋಣೆಯ ಬಾಗಿಲುಗಳು ಒಂದು ತಳ್ಳಿಗೇ ತೆರೆದುಕೊಂಡವು.

ವಸ್ತುಗಳು ಚೆಲ್ಲಾಪಿಲ್ಲಿಯಾದವು. ಒಂದು ಬಾಗಿಲು ಪೂರ್ತಿಯಾಗಿ ಕಳಚಿ ಒಂದು ಕುರ್ಚಿಯ ಮೇಲಿನಿಂದ ಪಲ್ಟಿ ಹೊಡೆಯಿತು. ರಾವು ಅವರ ಹೃದಯ ಗಂಟಲಿಗೆ ಬಂದಿತು. ಬಲವೆಲ್ಲ ಬಿಟ್ಟು ಒಂದು ಮೂಲೆಗೆ ಜಿಗಿದು, ಅವರು ಹುಚ್ಚಾಗಿ ಭಿಕ್ಷುಕಿಯನ್ನು ಅಪ್ಪಿಕೊಂಡರು.

ಕೂಡಲೇ ಅರಿವು ತಂದುಕೊಂಡು ಬಹಳ ನಾಚಿಕೊಂಡರು. ಆದರೆ ಆಕೆ ಅವರ ಕೈ ಹಿಡಿದು ನಡೆಸಿಕೊಂಡು ಹೊರಟರೆ, ಮಾತನಾಡದೆ ಬಾಗಿಲ ಬದಿಯ ಮೂಲೆಗೆ ಹೊರಟರು. ಅವಳು ಅವರನ್ನು ಕರೆದುಕೊಂಡು ಹೋಗಿ ಆ ಮೂಲೆಯಲ್ಲಿ ಕೂರಿಸಿದಳು. ತಾನೂ ಸಹ ಹತ್ತಿರವೇ ಕುಳಿತು, ಕೈಗಳನ್ನು ಅವರ ಸುತ್ತ ಬಳಸಿದಳು. ಆ ಅಪ್ಪುಗೆಯಲ್ಲಿ ಸಂಕೋಚವೇನೂ ಇರಲಿಲ್ಲ. ಅವರ ಮನಸ್ಸಿನಲ್ಲಿ ಪ್ರಳಯದಂತಹ ಮಥನ ನಡೆಯುತ್ತಿತ್ತು. ಆದರೆ ಆ ಬೆಚ್ಚನೆಯು ಅವರಿಗೆ ಜೀವದಗತ್ಯ. ಆದುದರಿಂದ ಅವರು ಬೇಡವೆನ್ನಲಿಲ್ಲ.

'ಸರಿಯಾಗಿ ಕೂತು, ನನ್ನ ಸುತ್ತಾ ಕೈ ಹಾಕಿಕೊಳ್ಳಿ. ಕೊಂಚ ಬೆಚ್ಚಗಿರುತ್ತದೆ. ಪಾಪ, ಸ್ವಾಮಿಯವರು ನಡುಗುತ್ತಿರುವಿರಿ.'

ಆ ಮಾತುಗಳು ರಾವು ಅವರಿಗೆ ತುಂಬಾ ಅಸಹ್ಯಕರವಾಗಿ ಕೇಳಿಸಿದವು. ಅವಳು ಮತ್ತೂ ಹತ್ತಿರಕ್ಕೆ ಸರಿದು ಅವರ ಮೈಗೆ ಒರಗಿದಳು. ಅವಳ ಸ್ತನಗಳ ಭಾರವನ್ನು ಅವರ ಮೊಣಕಾಲ ಮೇಲೆ ಹಾಕಿದಳು.